# ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಖಾನಾಪೂರ.

## ಸಿ.ಸಿ ನಂ: 101/2021

**ಪಿ.ಡಬ್ಲ್ಯೂ-1**
**ಸಿ.ಡಬ್ಲ್ಯೂ-1**

| | | |
|---|---|---|
| ಹೆಸರು | : | ಧನಶ್ರೀ ಬಾಬುರಾವ ಪಾಟೀಲ |
| ವಯಸ್ಸು | : | **30** ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಲೊಕೊಳ್ಳಿ |

ದಿನಾಂಕ 30-10-2023 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

**ಮುಖ್ಯ ವಿಚಾರಣೆ :** ಸಸಅ ರವರಿಂದ

ಆರೋಪಿತರು ಗೊತ್ತು. ಚಾ.ಸಾ.4 ಮತ್ತು 5 ನನ್ನ ಮಗ ಹಾಗೂ ಮಗಳು. ದಿನಾಂಕ 25.09.2020 ರಂದು ರಾತ್ರಿ 9.15 ಗಂಟೆಗೆ ನನ್ನ ಮಗ ಅಂಗಡಿಯನ್ನು ಮುಚ್ಚಿ ಬರುವಾಗ, ಆರೋಪಿಗಳು ನನ್ನ ಮಗನಿಗೆ ಹಲ್ಲೆ ಮಾಡಿರುತ್ತಾರೆ. ಆ ಸಮಯದಲ್ಲಿ ನಾನು ಸದರಿ ಸ್ಥಳಕ್ಕೆ ಹೋಗಿ ನನ್ನ ಮಗನಿಗೆ ಏಕೆ ಬಡಿಯುತ್ತಿದ್ದೀರಿ ಎಂದು ಕೇಳಿದ್ದಕ್ಕೆ ನನಗೂ ಸಹ ಹೊಡೆದಿದ್ದು ನಾನು ಮುರ್ಚೆ ತಪ್ಪಿ ಬಿದ್ದಿದ್ದು ನಂತರ ನನ್ನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಾನು ಹುಷಾರಾದ ನಂತರ ಮನೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಊರಿನ ಗ್ರಾಮಸ್ಥರಿಗೆ ಈಬಗ್ಗೆ ತಿಳಿಸಿದ್ದು, ರಾಜಿ ಮಾಡಿ ಸಮಸ್ಯೆ ಬಗೆಹರಿಸಲು ಪ್ರಯತ್ನಿಸಿದರು. ಮತ್ತೆ ಪುನಃ ಒಂದನೇ ಆರೋಪಿ ತಂಟೆಯನ್ನು ತೆಗೆದಿದ್ದು ಆದುದರಿಂದ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ದೂರು ನೀಡಿದ ನಂತರ ಆರೋಪಿತರು ಪ್ರಕರಣವನ್ನು ರಾಜಿ ಮಾಡಿಕೊಳ್ಳುವುದಾಗಿ ಹೇಳಿರುತ್ತಾರೆ. ನಾನು ಆಗುವುದಿಲ್ಲವೆಂದು ತಿಳಿಸಿರುತ್ತೇನೆ. ಸಾಕ್ಷಿದಾರರಿಗೆ ಈಗ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿ.ಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.1-ಎ ಎಂದು ಗುರುತಿಸಲಾಯಿತು.

*(ಸಾಕ್ಷಿಯು ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿದ್ದುದರಿಂದ ಸಸಅ ರವರ ಕೋರಿಕೆಯ ಮೇರೆಗೆ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಸಸಅ ರವರಿಗೆ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)*

<u>ಪಾಟೀ ಸವಾಲುಃ ಸಸಅ ರವರಿಂದ</u>

ನನ್ನ ಮಗನಿಗೆ ಹಲ್ಲೆ ಮಾಡುತ್ತಿದ್ದಾಗ ನಾನು ಕೇಳಲು ಹೋದಾಗ ನನ್ನನ್ನು ಅಡ್ಡಗಟ್ಟಿ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆಂದರೆ ಸರಿ. ಅದೇ ರೀತಿ ಆರೋಪಿತರು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆಂದು ದೂರಿನಲ್ಲಿ ಬರೆಸಿರುತ್ತೇವೆ ಎಂದರೆ ಸರಿ. ನಾನು ದೂರು ಕೊಟ್ಟ ನಂತರ ಪೋಲೀಸರು ಸ್ಥಳಕ್ಕೆ ಬಂದಿದ್ದು ನಾನು ಸ್ಥಳವನ್ನು ತೋರಿಸಿದ ಮೇರೆಗೆ ಪೋಲೀಸರು ಮಹಜರ ಕ್ರಮ ಜರುಗಿಸಿರುತ್ತಾರೆಂದರೆ ಸರಿ. ಸಾಕ್ಷಿದಾರರು ಮಹಜರನ್ನು ನೋಡಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಮಹಜರನ್ನು ನಿ.ಪಿ.2 ಎಂದು, ಸಾಕ್ಷಿದಾರರ ಸಹಿಯನ್ನು ನಿ.ಪಿ.2-ಎ ಎಂದು ಗುರುತಿಸಲಾಯಿತು. ಮಹಜರ ಸಮಯದಲ್ಲಿ ಪೋಟೋ ತೆಗೆದಿರುತ್ತಾರೆ. ಸಾಕ್ಷಿದಾರರು ಪೋಟೋಗಳನ್ನು ನೋಡಿ ಗುರುತಿಸಿದ ಮೇರೆಗೆ ಪೋಟೋಗಳನ್ನು ನಿ.ಪಿ.3 ಮತ್ತು 4 ಎಂದು ಗುರುತಿಸಲಾಯಿತು. ಈ ಬಗ್ಗೆ ಪೋಲೀಸರಿಗೆ ಪುನರ್ ಹೇಳಿಕೆ ನೀಡಿರುತ್ತೇನೆ.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ವಿ.ಎಸ್.ಹೆಚ್. ವಕೀಲರಿಂದ</u>

ನಾನು ಒಂಭತ್ತನೆಯ ತರಗತಿಯವರೆಗೆ ಮರಾಠಿ ಭಾಷೆಯಲ್ಲಿ ವ್ಯಾಸಾಂಗ ಮಾಡಿರುತ್ತೇನೆ. ನನಗೆ ಕನ್ನಡ ಓದಲು, ಬರೆಯಲು ಬರುತ್ತದೆ. ನಿ.ಪಿ.1 ದೂರನ್ನು ನಾನೇ ಬರೆದುಕೊಟ್ಟಿರುತ್ತೇನೆ. ಪೋಲೀಸರು ಹೇಳಿದ ಹಾಗೆ ದೂರನ್ನು ಬರೆದುಕೊಟ್ಟಿರುತ್ತೇನೆ. ಘಟನೆಯಾದ ಒಂದು ಗಂಟೆಯೊಳಗೆ ನಾನು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿರುತ್ತೇನೆ. ನಾನು ಹಾಗೂ ನನ್ನ ಮಗ ಪೋಲೀಸ್ ಠಾಣೆಗೆ ಹೋಗಿರುತ್ತೇವೆ. ಪೋಲೀಸ್ ಠಾಣೆಯಲ್ಲಿ ಸುಮಾರು 3 ತಾಸು ಇದ್ದೆವು. ನಂತರ ನಾನು ಪೋಲೀಸ್ ಠಾಣೆಗೆ ಹೋಗಿರುವುದಿಲ್ಲ. ಮೂರನೇ ಆರೋಪಿ ಪ್ರಸ್ತುತ ಸೈನ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾನೆಂದರೆ ಸರಿ. ಅದೇ ರೀತಿ ಒಂದನೇ ಆರೋಪಿಯ ಮತ್ತೊಬ್ಬ ಮಗ-ಎರಡನೇ ಆರೋಪಿ ಗೋವಾದಲ್ಲಿ ಕೆಲಸ ಮಾಡುತ್ತಿರುತ್ತಾನೆಂದರೆ ಸರಿ. ಒಂದನೇ ಆರೋಪಿ ಸ್ಟೇಟ ಬ್ಯಾಂಕ್ ನಲ್ಲಿ ಕೆಲಸ ಮಾಡುತ್ತಾರೆಂದರೆ ಸರಿ. ಆರೋಪಿತರ ಕುಟುಂಬ ಪ್ರತಿಷ್ಠಿತ ಕುಟುಂಬವಾಗಿರುತ್ತದೆಯೆಂದರೆ ಸರಿ.

ಒಂದನೇ ಆರೋಪಿ ನನ್ನ ಗಂಡನ ಸ್ನೇಹಿತನಾಗಿರುತ್ತಾನೆ. ಸುಮಾರು 2 ವರ್ಷಗಳ ವರೆಗೆ ಮಾತ್ರ ನನ್ನ ಗಂಡ ಹಾಗೂ ಒಂದನೇ ಆರೋಪಿ ಸ್ನೇಹಿತರಾಗಿದ್ದರು. ನನ್ನ ಗಂಡ ತೀರಿಕೊಂಡ ನಂತರ ನಾನು ಒಂದನೇ ಆರೋಪಿಯೊಂದಿಗೆ ಮಾತನಾಡುವುದನ್ನು ಬಿಟ್ಟಿರುತ್ತೇನೆ. ನನ್ನ ಗಂಡ ತೀರಿಕೊಂಡ ನಂತರ ನನ್ನ ಹಾಗೂ ಒಂದನೇ ಆರೋಪಿಯ ನಡುವೆ ಯಾವುದೇ ಮಾತುಕತೆಯಿರುವುದಿಲ್ಲ. ನಮಗೆ ಹಾಗೂ ಆರೋಪಿಗಳ ನಡುವೆ ಯಾವುದೇ ರೀತಿಯ ಭೇಟಾ

ಭೇಟಿ ಇರುವುದಿಲ್ಲ. ಒಂದನೇ ಆರೋಪಿ ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಾರೆಂದು ದೂರನ್ನು ನೀಡಿರುತ್ತೇನೆ. ಸುಮಾರು 15 ವರ್ಷಗಳಿಂದ ಒಂದನೇ ಆರೋಪಿ ನನ್ನನ್ನು ಕೆಟ್ಟ ದೃಷ್ಟಿಯಿಂದ ನೋಡುತ್ತಿದ್ದರು. ನಾನು ಸದರಿ ವಿಷಯವನ್ನು ಹೆದರಿ ಯಾರಿಗೂ ತಿಳಿಸಿರುವುದಿಲ್ಲ. ಈ ಬಗ್ಗೆ ದೂರಿನಲ್ಲಿ ನಮೂದಿಸಿರುತ್ತೇನೆ. ಮೇಲೆ ತಿಳಿಸಿದ ಎಲ್ಲಾ ವಿಷಯಗಳು ಸುಳ್ಳಿನಿಂದ ಕೂಡಿದ್ದು, ಆರೋಪಿತರ ಮೇಲಿನ ಸಿಟ್ಟಿನಿಂದ ನಾನು ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಾಲ್ಕನೇ ಆರೋಪಿ ನನ್ನ ಮಗನ ಮೇಲೆ ದೂರನ್ನು ನೀಡಿರುತ್ತಾರೆಂದರೆ ಸರಿ. ಆ ರೀತಿ ನನ್ನ ಮಗನ ಮೇಲೆ ದೂರು ನೀಡಿದ ಕುರಿತು ಯಾವುದೇ ಘಟನೆ ನಡೆಯದಿದ್ದರೂ ಆರೋಪಿಯ ಮೇಲೆ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಮಗ ಗೋವಾದಲ್ಲಿ ಹೋಟೇಲ್ ನಲ್ಲಿ ಕೆಲಸ ಮಾಡುತ್ತಾನೆ. ಸುಮಾರು 3 ವರ್ಷಗಳಿಂದ ಗೋವಾದಲ್ಲಿ ಕೆಲಸ ಮಾಡುತ್ತಿರುತ್ತಾನೆ. ಗಲಾಟೆಯಾಗುವಾಗ ಸುಮಾರು 50 ರಿಂದ 60 ಜನ ಇದ್ದರು. ಸದರಿಯವರ ಹೆಸರುಗಳನ್ನು ಹೇಳಬಲ್ಲೆ. ನನಗೆ ಕೇವಲ 5-6 ಜನರ ಪರಿಚಯ ಮಾತ್ರ ಇರುತ್ತದೆ, ಉಳಿದವರ ಹೆಸರುಗಳು ಗೊತ್ತಿಲ್ಲ. ಆರೋಪಿಯ ಮನೆಯಗಲ್ಲಿಯಲ್ಲಿ ವಾಸವಿದ್ದ ಸುಮಾರು 50-60 ಜನ ಕೂಡಿದ್ದು, ಸದರಿಯವರ ಹೆಸರುಗಳು ಗೊತ್ತಿಲ್ಲ. ಆರೋಪಿಯ ಮನೆಯ ಹತ್ತಿರ ಸುಮಾರು 30 ವಾಸದ ಮನೆಗಳು ಇರುತ್ತವೆ. ಪ್ರಸ್ತುತ ಪ್ರಕರಣದಲ್ಲಿ ಸಾಕ್ಷಿದಾರರೆಂದು ಹೆಸರಿಸಿರುವ ವ್ಯಕ್ತಿಗಳು ಮಾತ್ರ ಗೊತ್ತಿದ್ದು, ಬೇರೆಯವರು ನನಗೆ ಗೊತ್ತಿಲ್ಲ. ಸದರಿ ವ್ಯಕ್ತಿಗಳ ಜೊತೆಗೆ ನನ್ನ ಸಂಬಂಧ ಚೆನ್ನಾಗಿ ಇರುತ್ತದೆ. ಪ್ರತ್ಯಕ್ಷ ಸಾಕ್ಷಿದಾರರುಗಳ ಜೊತೆ ಚೆನ್ನಾಗಿ ಇದ್ದು, ಅವರು ಹೇಳಿದಂತೆ ನಾನು ಮಾಡುತ್ತೇನೆ ಹಾಗೂ ನಾನು ಹೇಳಿದಂತೆ ಅವರು ಮಾಡುತ್ತಾರೆಂದರೆ ಸರಿ.

ಸುಮಾರು 2 ½ ಗಂಟೆಗಳ ಕಾಲ ಹೊಡಿ ಬಡಿ ಮಾಡಿರುತ್ತಾರೆ. ಆರೋಪಿತರು ಮೊದಲು ನನ್ನ ಮಗನಿಗೆ ಕಟ್ಟಿಗೆಯಿಂದ ಹೊಡಿ ಬಡಿ ಮಾಡಿದ್ದು, ತಡೆಯಲು ಹೋದ ನನಗೆ ಕಾರದ ಪುಡಿ ಎರಚಿ ನನಗೂ ಸಹ ಹೊಡಿ ಬಡಿ ಮಾಡಿರುತ್ತಾರೆ. ಕಾರದ ಪುಡಿ ಎರಚಿದ ಕಾರಣ ನೆಲದ ಮೇಲೆ ಸಹ ಬಿದ್ದಿರುತ್ತದೆ. ಆ ದಿನ ಆರೋಪಿಗಳ ಹತ್ತಿರ ಒಬ್ಬರ ಕೈಯ್ಯಲ್ಲಿ ಕಟ್ಟಿಗೆಯಿದ್ದು, ಮತ್ತೊಬ್ಬರ ಕೈಯ್ಯಲ್ಲಿ ಕಾರದ ಪುಡಿ ಇತ್ತು. ನಾನು ಮಹಜರ ಸಮಯದಲ್ಲಿ ಹಲ್ಲೆಗೆ ಉಪಯೋಗಿಸಿದ ಕಟ್ಟಿಗೆ ಹಾಗೂ ನೆಲದ ಮೇಲೆ ಬಿದ್ದ ಕಾರದ ಪುಡಿಯನ್ನು ತನಿಖಾಧಿಕಾರಿಗೆ ತೋರಿಸಿರುತ್ತೇನೆ. ಈ ಬಗ್ಗೆ ಅದರ ಪೋಟೋ ತೆಗೆದಿರುವುದಿಲ್ಲ.

ನಾನು ಮೊದಲು ಪೋಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ್ದು ನಂತರ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ. ಸುಮಾರು 4 ಗಂಟೆಗಳ ಕಾಲ ಆಸ್ಪತ್ರೆಯಲ್ಲಿ ಚಿಕಿತ್ಸೆ

ಪಡೆದಿರುತ್ತೇನೆ. ರಾತ್ರಿ 11.00 ಗಂಟೆ ಸುಮಾರಿಗೆ ನಾನು ಆಸ್ಪತ್ರೆಗೆ ಹೋಗಿದ್ದು 2.30 ಗಂಟೆ ಸಮಯದಲ್ಲಿ ಮನೆಗೆ ವಾಪಸ್ಸು ಹೋಗಿರುತ್ತೇನೆ. ನಾನು ಯಾವುದೇ ಚಿಕಿತ್ಸೆ ಪಡೆಯದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಒಂದನೇ ಆರೋಪಿಯು ನನಗೆ ರಾಂಡೆ, ಚಿನಾಲಿ, ಬಟ್ಟೆ ಕಳೆದು ಹೊಡೆಯುತ್ತೇನೆಂದು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದು, ಈ ಬಗ್ಗೆ ನನ್ನ ದೂರಿನಲ್ಲಿ ಬರೆದಿರುತ್ತೇನೆ. ಪ್ರಸ್ತುತ ಪ್ರಕರಣದಲ್ಲಿ ದೂರನ್ನು ಹೊರತುಪಡಿಸಿ ತನಿಖಾಧಿಕಾರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆರೋಪಿತರು ನಮ್ಮ ಮೇಲೆ ದೂರನ್ನು ನೀಡಿದ್ದು ನಾನು ಪೋಲೀಸ್ ಠಾಣೆಯಲ್ಲಿ ತಂಟೆ ಮಾಡುವುದಿಲ್ಲವೆಂದು ಬರೆದುಕೊಟ್ಟು ಬಂದಿದ್ದೆವು ಎಂದರೆ ಸರಿ. ನಾನು ಆರೋಪಿಗಳ ಮೇಲೆ ಎರಡು ಸಲ ಪೋಲೀಸರಿಗೆ ದೂರನ್ನು ನೀಡಿರುತ್ತೇನೆ. ಆ ರೀತಿ ನಾನು ಎರಡು ಸಲ ಪೋಲೀಸರಿಗೆ ದೂರು ನೀಡಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ನಾನು ಆರೋಪಿತರ ಮರ್ಯಾದೇ ಕಳೆಯಲು ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನನಗೆ ಒಂದು ಸಲ ಮಾತ್ರ ಹೊಡೆದಿದ್ದು ನಾನು ಮೂರ್ಚೆ ಬಿದ್ದ ಕಾರಣ ನಂತರ ನನಗೆ ಏನಾಗಿರುತ್ತದೆ ಎಂದು ಗೊತ್ತಿಲ್ಲ. ನನಗೆ ನಾಲ್ಕು ತಾಸು ಆದ ನಂತರ ಪ್ರಜ್ಞೆ ಬಂದಿರುತ್ತದೆ. ನಾನು ಹೇಳಿದಂತೆ ಯಾವುದೇ ಘಟನೆ ನಡೆದಿರುವುದಿಲ್ಲವೆಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿತರು ನನಗಾಗಲಿ, ನನ್ನ ಮಗನಿಗಾಗಲಿ ಹೊಡಿ ಬಡಿ ಮಾಡಿರುವುದಿಲ್ಲವೆಂದರೆ ಸರಿಯಲ್ಲ. ಆರೋಪಿತರ ಮೇಲಿನ ಸಿಟ್ಟಿನಿಂದ ಸುಳ್ಳು ದೂರನ್ನು ನೀಡಿದ್ದು ಆ ರಿತ್ಯಾ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ದೂರು ನೀಡಿದ ನಂತರ ಪೋಲೀಸರನ್ನು ನಾನು ಭೇಟಿ ಮಾಡಿರುವುದಿಲ್ಲ ಹಾಗೂ ಅವರೂ ಸಹ ನನ್ನನ್ನು ಭೇಟಿ ಮಾಡಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.